**<u>ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ</u>**

**<u>ಸಿ ಸಿ ನಂಃ 1285/2024</u>**

ಪಿರ್ಯಾದುದಾರರು : ಕನಕಪುರ ಸಂಚಾರಿ ಪೋಲೀಸ್ ಠಾಣೆ.

– ವಿರುದ್ಧ –

ಆರೋಪಿತರು ಃ 1. ದಾವಲ್ ಸಾಬ್
ಬಿನ್ ಕಸಿಮ್ ಸಾಬ್
ವಯಸ್ಸು 27 ವರ್ಷಗಳು,
ವಾಸ ಃ ಬಾಚಿಮಟ್ಟಿ ಗ್ರಾಮ ಮತ್ತು ಪೋಸ್ಟ
ಸೂರಪುರ ತಾಲ್ಲೂಕು
ಯದಗಿರಿ

**:: ಆಪಾದನೆ ::**

**ಶ್ರೀಮತಿ. ಲತಾಶ್ರೀ ಬಿ.ವಿ., ಬಿ.ಎ.ಎಲ್.,ಎಲ್.ಬಿ ಒಂದನೇ ಅಪರ ನ್ಯಾಯಿಕ ದಂಡಾಧಿಕಾರಿಗಳು, ಕನಕಪುರ, ಆದ ನಾನು ನಿಮ್ಮ ಮೇಲೆ ದೋಷಾರೋಪಣೆ ಏನೆಂದರೆಃ-**

ದಿನಾಂಕ-30.06.2024 ರಂದು ಬೆಳಿಗ್ಗೆ 9.15 ಗಂಟೆ ಸಮಯದಲ್ಲಿ ಮಾನ್ಯ ಘನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವ ಕನಕಪುರ ಸಂಚಾರ ಪೊಲೀಸ್ ಠಾಣಾ ಸರಹದು ಕನಕಪುರ ತಾಲೂಕು, ಕಸಬಾ ಹೋಬಳಿ, ತುಂಗಣಿ ಗೇಟ್ ಬಳಿ ಇರುವ ಕನಕಪುರ-ಬೆಂಗಳೂರು ಮುಖ್ಯ ರಸ್ತೆಯಲ್ಲಿ ಚಾಸಾ-2 ಚಿರಂಜೀವಿ ರವರು ಮೃತ ಹಾಗಾ ಚಾಸಾ-3 ರಿಷಬ್ ಗೌತಮ್, ಚಾಸಾ-4 ಸುಬೋಷಿತ್, ಚಾಸಾ-5 ಮತ್ತು ಚಾಸಾ-6 ರವರುಗಳನ್ನು KA-04 MV-9480 Honda Amaze ಕಾರಿನಲ್ಲಿ ಕೂರಿಸಿ ಬೆಂಗಳೂರು ಕಡೆಯಿಂದ ಚುಂಚಿಪಾಲ್ಸ್ ಕಡೆಗೆ ಕಾರನ್ನು ಚಾಲನೆ ಮಾಡಿಕೊಂಡು ಬಂದು ಬೈಪಾಸ್ ರಸ್ತೆಯ ಕಡೆಗೆ ತಿರುವು ಪಡೆಯುತ್ತಿದ್ದಾಗ, ಆರೋಪಿಯಾದ ನೀವು KA-03 C-4744 ಗೂಡ್ಸ್ ವಾಹನದ ಚಾಲಕನಾಗಿದ್ದು, ತಾನು ಚಾಲನೆ ಮಾಡುತ್ತಿದ್ದ ವಾಹನವನ್ನು ಕನಕಪುರ ಕಡೆಯಿಂದ ಬೆಂಗಳೂರು ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ, ಬೆಂಗಳೂರು ಕಡೆಯಿಂದ ಬರುತ್ತಿದ್ದ ಚಾಸಾ-02 ರವರು ಚಾಲನೆ ಮಾಡುತ್ತಿದ್ದ KA-04 MV-9480 Honda Amaze ಕಾರಿನ ಎಡಭಾಗಕ್ಕೆ ಡಿಕ್ಕಿ ಹೊಡೆಸಿ ಅಪಘಾತವನ್ನುಂಟು ಮಾಡಿದ್ದರಿಂದ ಎರಡು ವಾಹನಗಳು ಜಖಂಗೊಂಡು, ಚಾಸಾ-02 ರವರ ತಲೆಯ ಎಡಭಾಗಕ್ಕೆ ತೀವ ಸ್ವರೂಪದ ಗಾಯವಾಗಿದ್ದು, ಚಾಸಾ-03 ರವರಿಗೆ ಬಲ ಕುತ್ತಿಗೆ ಮೇಲೆ, ಬಲ ತಲೆಯ ಮೇಲೆ ತೀವ್ರ ಸ್ವರೂಪದ ಗಾಯವಾಗಿದ್ದು,

ಚಾಸಾ-04 ರವರಿಗೆ ಎಡಭುಜಕ್ಕೆ ಸಾಧರಣ ಸ್ವರೂಪದ ಏಟು ಬಿದಿದ್ದು, ಎಡಗಣ್ಣಿನ ಹುಬ್ಬಿನ ಬಳಿ ತೀವ್ರ ಸ್ವರೂಪದ ಏಟು ಬಿದಿದ್ದು, ಚಾಸಾ-05 ರವರಿಗೆ ಎಡಗಣ್ಣಿನ ಮೇಲೆ, ಎಡಕಿವಿಗೆ, ಎಡ ಕೈಗೆ, ಬಲಕಾಲಿಗೆ, ಕತ್ತಿನ ಮೇಲೆ, ಎಡತಲೆಗೆ, ಸಾಧಾರಣ ಸ್ವರೂಪದ ಏಟು ಬಿದಿದ್ದು ಬಲತೋಳಿಗೆ ತೀವ್ರ ಸ್ವರೂಪದ ಏಟು ಬಿದಿದ್ದು, ಚಾಸಾ-06 ರವರ ತಲೆಗೆ ತೀವ್ರ ಸ್ವರೂಪದ ಏಟು ಬಿದಿದ್ದು, ಚಾಸಾ- 07 ರವರಿಗೆ ಬಲಗಾಲಿಗೆ ಸಾಧಾರಣ ಸ್ವರೂಪದ ಏಟು ಬಿದ್ದಿರುತ್ತದೆ ಹಾಗೂ ಆರೋಪಿಯಾದ ನಿಮ್ಮ ಬಲಮುಂಗೈಗೆ ಸಾಧಾರಣ ಸ್ವರೂಪದ ಏಟು ಬಿದ್ದಿದ್ದು, ಈ ಅಪಘಾತದಲ್ಲಿ ಮೃತ ಅಭಿಷೇಕ್ ದತ್ತ ರವರ ಬಲ ಹಣೆಯ ಮೇಲೆ, ಎಡ ಕಪಾಲದ ಮೇಲೆ, ಎಡಗಾಲಿನ ಮಂಡಿಯ ಮೇಲೆ ಮತ್ತು ಎಡಕಿವಿಯ ಮೇಲೆ ಜೋರಾಗಿ ಏಟು ಬಿದಿದ್ದು, ಅಪಘಾತದ ನಂತರ ದಯಾನಂದ ಸಾಗರ್ ಆಸ್ಪತ್ರೆಗೆ ದಾಖಲು ಮಾಡಿ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ಸಾಗರ್ ಆಸ್ಪತ್ರೆಗೆ ದಾಖಲು ಮಾಡಿದ್ದು, ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ-30.06.2024 ರಂದು ರಾತ್ರಿ 9.15 ಗಂಟೆಗೆ ಅಭಿಷೇಕ್ ದತ್ತ ರವರು ಮೃತಪಟ್ಟಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. 279, 337, 338 ಮತ್ತು 304(ಎ) ರಂತೆ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲಿನ ಆಪಾದನೆಯು ಈ ನ್ಯಾಯಾಲಯದ ಸಂಜ್ಞೆಯೊಳಗೆ ನಡೆದಿದ್ದು ಆ ಕಾರಣ ನಿಮ್ಮನ್ನು ಮೇಲ್ಕಂಡ ಆಪಾದನಾ ವಿಚಾರಣೆಗೆ ಗುರಿಪಡಿಸಿದ್ದೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 29.12.2025 ರಂದು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್. ಸಿ. ಕನಕಪುರ.**

**ಆರೋಪಿಯ ಹೇಳಿಕೆ**

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ ?

ಉತ್ತರ 1 ಃ

2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೋ?

ಉತ್ತರ 1 ಃ

ಮೇಲಿನ ಹೇಳಿಕೆಯನ್ನು ಆಪಾದಿತನಿಗೆ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸುತ್ತೇನೆ.

**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್. ಸಿ. ಕನಕಪುರ.**